Phone: 08282-257424
E-Mail: kuhrmsection@gmail.com
Fax: 08282-256262
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ – 577 451

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

ಸಂಖ್ಯೆ:ಕುವಿ:ಮಾಸನಿ–3 ಮತ್ತು 7:(44): 1543 :2025–26/551 ದಿನಾಂಕ:24–07–2025

## ಜಾಹೀರಾತು ಪ್ರಕಟಣೆ

ಕುವೆಂಪು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ, ಕಡೂರು / ಚಿಕ್ಕಮಗಳೂರು ಹಾಗೂ ವಿಶ್ವವಿದ್ಯಾಲಯದ ಅಧೀನಕ್ಕೊಳಪಡುವ ಘಟಕ ಕಾಲೇಜುಗಳಲ್ಲಿರುವ ಸ್ನಾತಕೋತ್ತರ ವಿಭಾಗ ಹಾಗೂ ಘಟಕ / ನೇರ ಆಡಳಿತಕ್ಕೊಳಪಟ್ಟ ಸ್ನಾತಕ ಪದವಿ ಕಾಲೇಜುಗಳ 2025–26ನೇ ಶೈಕ್ಷಣಿಕ ಸಾಲಿನ ಈ ಕೆಳಕಂಡ ವಿಷಯಗಳಿಗೆ ಲಭ್ಯ ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಪಡೆಯಲು ಯುಜಿಸಿ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

## ಸ್ನಾತಕೋತ್ತರ ವಿಭಾಗಗಳು

1. **ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.**

| ಕ್ರಮ ಸಂಖ್ಯೆ | ವಿಭಾಗ |
|---|---|
| 1. | ಕನ್ನಡ |
| 2. | ಇಂಗ್ಲೀಷ್ |
| 3. | ಹಿಂದಿ |
| 4. | ಅರ್ಥಶಾಸ್ತ್ರ |
| 5. | ರಾಜ್ಯಶಾಸ್ತ್ರ |
| 6. | ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ |
| 7. | ಸಮಾಜಶಾಸ್ತ್ರ |
| 8. | ಸಮಾಜಕಾರ್ಯ |
| 9. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ |
| 10. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ |
| 11. | ಜೀವರಸಾಯನಶಾಸ್ತ್ರ |
| 12. | ರಸಾಯನಶಾಸ್ತ್ರ |
| 13. | ಔದ್ಯೋಗಿಕ ರಸಾಯನಶಾಸ್ತ್ರ |
| 14. | ಭೌತಶಾಸ್ತ್ರ |
| 15. | ಎಲೆಕ್ಟ್ರಾನಿಕ್ಸ್ |
| 16. | ಅನ್ವಯಿಕ ಸಸ್ಯಶಾಸ್ತ್ರ |
| 17. | ಭೂ ವಿಜ್ಞಾನ |
| 18. | ಅನ್ವಯಿಕ ಪ್ರಾಣಿಶಾಸ್ತ್ರ |
| 19. | ವನ್ಯಜೀವಿ ನಿರ್ವಹಣೆ |
| 20. | ಸೂಕ್ಷ್ಮಾಣು ಜೀವಶಾಸ್ತ್ರ |
| 21. | ಜೈವಿಕ ತಂತ್ರಜ್ಞಾನ |
| 22. | ಪರಿಸರ ವಿಜ್ಞಾನ |
| 23. | ಆಹಾರ ತಂತ್ರಜ್ಞಾನ |
| 24. | ಎಂ.ಸಿ.ಎ. / ಕಂಪ್ಯೂಟರ್ ಸೈನ್ಸ್ |
| 25. | ಗಣಿತಶಾಸ್ತ್ರ |
| 26. | ವಾಣಿಜ್ಯಶಾಸ್ತ್ರ |
| 27. | ಎಂ.ಬಿ.ಎ / ಎಂ.ಬಿ.ಎ (ಹೆಚ್.ಆರ್.ಎಂ) |
| 28. | ಎಂ.ಬಿ.ಎ (ಟಿ.ಟಿ.ಎಂ) |
| 29. | ಶಿಕ್ಷಣ |
| 30. | ದೈಹಿಕ ಶಿಕ್ಷಣ |
| 31. | ಯೋಗ – ಪಿ.ಜಿ. ಡಿಪ್ಲೋಮ |

2. ಸ್ನಾತಕೋತ್ತರ ಕೇಂದ್ರ, ಕಡೂರು.

| ಕ್ರ. ಸಂಖ್ಯೆ | ವಿಭಾಗ |
|---|---|
| 1. | ಔಷಧೀಯ ರಸಾಯನಶಾಸ್ತ್ರ |
| 2. | ರಸಾಯನಶಾಸ್ತ್ರ |
| 3. | ವಾಣಿಜ್ಯಶಾಸ್ತ್ರ |

3. ಸ್ನಾತಕೋತ್ತರ ಕೇಂದ್ರ, ಚಿಕ್ಕಮಗಳೂರು.

| ಕ್ರ. ಸಂಖ್ಯೆ | ವಿಭಾಗ |
|---|---|
| 1. | ಗಣಿತಶಾಸ್ತ್ರ |
| 2. | ವಾಣಿಜ್ಯಶಾಸ್ತ್ರ |

4. ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ

| ಕ್ರ. ಸಂಖ್ಯೆ | ವಿಭಾಗ |
|---|---|
| 1. | ಉರ್ದು |
| 2. | ಸಂಸ್ಕೃತ |

5. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

| ಕ್ರ.ಸಂ. | ವಿಭಾಗ |
|---|---|
| 1 | ಇಂಗ್ಲೀಷ್ |
| 2 | ರಾಜ್ಯಶಾಸ್ತ್ರ |
| 3 | ಅರ್ಥಶಾಸ್ತ್ರ |

6. ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ

| ಕ್ರ.ಸಂ. | ವಿಭಾಗ |
|---|---|
| 1 | ಜೈವಿಕ ತಂತ್ರಜ್ಞಾನ |
| 2 | ಔದ್ಯೋಗಿಕ ರಸಾಯನಶಾಸ್ತ್ರ |
| 3 | ರಸಾಯನಶಾಸ್ತ್ರ |
| 4 | ಭೌತಶಾಸ್ತ್ರ |

7. ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ

| ಕ್ರ.ಸಂ. | ವಿಭಾಗ |
|---|---|
| 1 | ಎಂ.ಬಿ.ಎ |
| 2 | ಎಂ.ಕಾಂ |

## ಘಟಕ / ನೇರ ಆಡಳಿತಕ್ಕೊಳಪಟ್ಟ ಕಾಲೇಜು

**1. ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ**

| ಕ್ರ.ಸಂ. | ವಿಭಾಗ |
|---|---|
| 1 | ಕನ್ನಡ |
| 2 | ಸಂಸ್ಕೃತ |
| 3 | ಇಂಗ್ಲೀಷ್ |
| 4 | ಭಾಷಾಶಾಸ್ತ್ರ |
| 5 | ಹಿಂದಿ |
| 6 | ಉರ್ದು |
| 7 | ಅರ್ಥಶಾಸ್ತ್ರ |
| 8 | ರಾಜ್ಯಶಾಸ್ತ್ರ |
| 9 | ಸಮಾಜ ಕಾರ್ಯ |
| 10 | ಇತಿಹಾಸ |
| 11 | ಪತ್ರಿಕೋದ್ಯಮ |
| 12 | ಶಿಕ್ಷಣ |
| 13 | ದೈಹಿಕ ಶಿಕ್ಷಣ |
| 14 | ಮನಃಶಾಸ್ತ್ರ |
| 15 | ಗಣಕ ವಿಜ್ಞಾನ |
| 16 | ಪರಿಸರ ವಿಜ್ಞಾನ |
| 17 | ಪರಿಸರ ಅಧ್ಯಯನ |
| 18 | ಭಾರತ ಸಂವಿಧಾನ / ಸಂವಿಧಾನದ ಮೌಲ್ಯಗಳು |
| 19 | ಅತಿಥಿ ಗ್ರಂಥಪಾಲಕರು |

**2. ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ**

| ಕ್ರ.ಸಂ. | ವಿಭಾಗ |
|---|---|
| 1. | ಕನ್ನಡ |
| 2. | ಇಂಗ್ಲೀಷ್ |
| 3. | ಉರ್ದು |
| 4. | ಹಿಂದಿ |
| 5. | ಭೌತಶಾಸ್ತ್ರ |
| 6. | ಎಲೆಕ್ಟ್ರಾನಿಕ್ಸ್ |
| 7. | ಗಣಿತಶಾಸ್ತ್ರ |
| 8. | ಸಸ್ಯಶಾಸ್ತ್ರ |
| 9. | ಪ್ರಾಣಿಶಾಸ್ತ್ರ |
| 10. | ಜೈವಿಕ ತಂತ್ರಜ್ಞಾನ |
| 11. | ಸೂಕ್ಷ್ಮಾಣು ಜೀವಶಾಸ್ತ್ರ |
| 12. | ಭೂ ವಿಜ್ಞಾನ |
| 13. | ರಸಾಯನಶಾಸ್ತ್ರ |
| 14. | ಜೀವ ರಸಾಯನಶಾಸ್ತ್ರ |
| 15. | ಕಂಪ್ಯೂಟರ್ ಸೈನ್ಸ್ |
| 16. | ದೈಹಿಕ ಶಿಕ್ಷಣ |
| 17. | ಪರಿಸರ ವಿಜ್ಞಾನ |
| 18. | ಪರಿಸರ ಅಧ್ಯಯನ |
| 19. | ಭಾರತ ಸಂವಿಧಾನ / ಸಂವಿಧಾನದ ಮೌಲ್ಯಗಳು |
| 20. | ಅತಿಥಿ ಗ್ರಂಥಪಾಲಕರು |

**3. ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ**

| ಕ್ರ.ಸಂ. | ವಿಭಾಗ |
|---|---|
| 1. | ಕನ್ನಡ |
| 2. | ಸಂಸ್ಕೃತ |
| 3. | ಇಂಗ್ಲೀಷ್ |

| | |
|---|---|
| 4. | ಹಿಂದಿ |
| 5. | ಉರ್ದು |
| 6. | ಬಿ.ಕಾಂ |
| 7. | ಬಿ.ಬಿ.ಎ |
| 8. | ಬಿ.ಬಿ.ಎ (ಟಿ&ಟಿ) |
| 9. | ದೈಹಿಕ ಶಿಕ್ಷಣ |
| 10. | ಪರಿಸರ ವಿಜ್ಞಾನ |
| 11. | ಪರಿಸರ ಅಧ್ಯಯನ |
| 12. | ಭಾರತ ಸಂವಿಧಾನ / ಸಂವಿಧಾನದ ಮೌಲ್ಯಗಳು |
| 13. | ಅತಿಥಿ ಗ್ರಂಥಪಾಲಕರು |

4. **ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಶಂಕರಘಟ್ಟ (ನೇರ ಆಡಳಿತಕ್ಕೊಳಪಟ್ಟ ಕಾಲೇಜು)**

| ಕ್ರ.ಸಂ. | ವಿಭಾಗ |
|---|---|
| 1. | ಕನ್ನಡ |
| 2. | ಇಂಗ್ಲೀಷ್ |
| 3. | ಇತಿಹಾಸ |
| 4. | ಅರ್ಥಶಾಸ್ತ್ರ |
| 5. | ರಾಜ್ಯಶಾಸ್ತ್ರ |
| 6. | ಸಮಾಜಶಾಸ್ತ್ರ |
| 7. | ದೈಹಿಕ ಶಿಕ್ಷಣ |
| 8. | ಬಿ.ಕಾಂ |
| 9. | ಬಿ.ಸಿ.ಎ |
| 10. | ಪರಿಸರ ವಿಜ್ಞಾನ |
| 11. | ಪರಿಸರ ಅಧ್ಯಯನ |
| 12. | ಭಾರತ ಸಂವಿಧಾನ / ಸಂವಿಧಾನದ ಮೌಲ್ಯಗಳು |
| 13. | ಅತಿಥಿ ಗ್ರಂಥಪಾಲಕರು |

## ಅಭ್ಯರ್ಥಿಗಳಿಗೆ ಸೂಚನೆ

1. ಅರ್ಜಿಗಳನ್ನು ವಿಶ್ವವಿದ್ಯಾನಿಲಯದ ವೆಬ್ ಸೈಟ್ www.kuvempu.ac.in ನಲ್ಲಿ ತೋರಿಸಿರುವ ಸ್ನಾತಕೋತ್ತರ ವಿಷಯಗಳಿಗೆ https://forms.gle/4QvhZWQoduGDc14g9 ಲಿಂಕ್‌ನ್ನು ಹಾಗೂ ಸ್ನಾತಕ ವಿಷಯಗಳಿಗೆ https://forms.gle/8mvs2nT5Mm9cxedT7 ಲಿಂಕ್‌ನ್ನು ಆಯ್ಕೆ ಮಾಡಿ **Google Form** ನಲ್ಲಿಯೂ ಸಹ ಅರ್ಜಿ ಸಲ್ಲಿಸಲು ಸೂಚಿಸಿದೆ. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:24-07-2025 ಅಂತಿಮ ದಿನಾಂಕ:04-08-2025
2. **ಭರ್ತಿ ಮಾಡಲಾದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಎಲ್ಲಾ ದಾಖಲಾತಿಗಳೊಂದಿಗೆ ಉಪಕುಲಸಚಿವರು, ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ ಇಲ್ಲಿಗೆ 04-08-2025 ರಂದು ಸಂಜೆ 4-00 ರೊಳಗಾಗಿ ತಲುಪುವಂತೆ ಕಳುಹಿಸುವುದು.**
3. **ಈ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಸೇವೆ ಸಲ್ಲಿಸಿರುವವರು ಸಹ ಪುನಃ ಅರ್ಜಿ ಸಲ್ಲಿಸುವುದು ಕಡ್ಡಾಯ.**
4. ಅತಿಥಿ ಉಪನ್ಯಾಸಕರುಗಳ ಸೇವೆ ಪಡೆಯುವ ಪ್ರಕ್ರಿಯೆಯ ಅನುಸರಣೆ, ನೇಮಕಾತಿ ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆಯು ತಾತ್ಕಾಲಿಕವಾಗಿದ್ದು, ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪರಿಗಣಿಸಿ ನಿಗದಿಪಡಿಸುವ ಹಾಗೂ ಸಂಭಾವನೆ ಪಾವತಿಗಳು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ತೆಗೆದುಕೊಳ್ಳುವ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.
5. **ಅತಿಥಿ ಉಪನ್ಯಾಸಕ ಸೇವೆಗೆ ಆಯ್ಕೆಗೊಳ್ಳುವ ಅಭ್ಯರ್ಥಿಗಳಿಗೆ 2025-26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯನುಸಾರ ಸಂಭಾವನೆಯನ್ನು ಪಾವತಿಸಲಾಗುತ್ತದೆ.**
6. ಅತಿಥಿ ಉಪನ್ಯಾಸಕರ ಸೇವೆಯು ಸ್ನಾತಕೋತ್ತರ ವಿಭಾಗಗಳ / ಕಾಲೇಜುಗಳಲ್ಲಿ ಲಭ್ಯವಿರುವ ಬೋಧನಾ ಕಾರ್ಯಭಾರ ಹಾಗೂ ಶೈಕ್ಷಣಿಕ / ಸೆಮಿಸ್ಟರ್ ಅವಧಿಗೆ ಮಾತ್ರ ಸೀಮಿತವಾಗಿದ್ದು, ಸದರಿ ಅವಧಿಯು ಮುಕ್ತಾಯವಾಗುವ ದಿನಾಂಕದಂದು ಸದರಿ ಅತಿಥಿ ಉಪನ್ಯಾಸಕರ ಸೇವೆಯು ತಾನೇ ತಾನಾಗಿ ಯಾವುದೇ ಮುನ್ಸೂಚನೆ ಇಲ್ಲದೆ ರದ್ದಾಗುತ್ತದೆ.

7. ಅತಿಥಿ ಉಪನ್ಯಾಸಕರ ಸೇವೆಯನ್ನು ಯಾವುದೇ ಕಾರಣಕ್ಕೂ ಹಂಗಾಮಿ / ತಾತ್ಕಾಲಿಕ / ಅರೆಕಾಲಿಕ ನೇಮಕಾತಿಯೆಂದು ಪರಿಗಣಿಸಲಾಗುವುದಿಲ್ಲ. ಇದು ಶುದ್ಧಾಂಗ ಅತಿಥಿ ಉಪನ್ಯಾಸದ ಸೇವೆಯಾಗಿರುತ್ತದೆ.

8. **ಯುಜಿಸಿ ಪ್ರಕಟಣೆ ದಿನಾಂಕ:18-07-2018 ಮತ್ತು ಯುಜಿಸಿ ಮಾರ್ಗಸೂಚಿ ಪತ್ರ ಸಂಖ್ಯೆ:F.25-1/2018 (PS/MISC) dated:28-01-2019** ರನ್ವಯ **ಅಭ್ಯರ್ಥಿಗಳು ಸಂಬಂಧಿಸಿದ ವಿಷಯದ ಸ್ನಾತಕೋತ್ತರ ಪದವಿಯನ್ನು ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರಬೇಕು** ಹಾಗೂ ಯುಜಿಸಿ ನಿಯಮಾನುಸಾರ ಸಾಮಾನ್ಯ ಹಾಗೂ ಇತರೆ ವರ್ಗದ ಅಭ್ಯರ್ಥಿಗಳು ಕನಿಷ್ಠ ಶೇ.55 ಅಂಕಗಳನ್ನು ಹಾಗೂ ಎಸ್.ಸಿ/ಎಸ್.ಸಿ ಅಭ್ಯರ್ಥಿಗಳು ಕನಿಷ್ಠ ಶೇ.50 ಅಂಕಗಳನ್ನು ಕಡ್ಡಾಯವಾಗಿ ಹೊಂದಿರಬೇಕು; ಮತ್ತು ಎನ್.ಇ.ಟಿ/ ಎಸ್.ಎಲ್.ಇ.ಟಿ/ಕೆ-ಸೆಟ್ /ಪಿಹೆಚ್.ಡಿ ಪದವಿಯನ್ನು ಹೊಂದಿರುವುದು ಕನಿಷ್ಠ ಅರ್ಹತೆಯಾಗಿರುತ್ತದೆ.

9. ಗ್ರಂಥಪಾಲಕರ ಹುದ್ದೆಗಳು ಖಾಲಿ ಇರುವ ಕಾಲೇಜುಗಳಲ್ಲಿ ಅತಿಥಿ ಗ್ರಂಥಪಾಲಕರ ಸೇವೆಯನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದ್ದು; ಅವರಿಗೆ 19 ಗಂಟೆಗಳ ಕಾರ್ಯಭಾರವನ್ನು ನಿಗಧಿಗೊಳಿಸಲಾಗಿರುತ್ತದೆ. ಅತಿಥಿ ಗ್ರಂಥಪಾಲಕರುಗಳಿಗೆ ಪ್ರಾಂಶುಪಾಲರು ನಿಗಧಿಗೊಳಿಸುವ ಕಾರ್ಯಗಳನ್ನು ಖಾಯಂ ಬೋಧಕರ ಮೇಲುಸ್ತುವಾರಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ.
   - ಪ್ರಾಂಶುಪಾಲರು ಅತಿಥಿ ಗ್ರಂಥಪಾಲಕರಿಗೆ ಯಾವುದೇ ಆರ್ಥಿಕ ವ್ಯವಹಾರಗಳ ಪ್ರತ್ಯಾಯೋಜನೆ ನೀಡಲು ಅವಕಾಶವಿರುವುದಿಲ್ಲ. ದಾಸ್ತಾನುಗಳಿಗೆ ಸಂಬಂಧಿಸಿದಂತೆ ಖಾಯಂ ಬೋಧಕರ ಮೇಲುಸ್ತುವಾರಿಯಲ್ಲಿ ಲೆಕ್ಕ ಪತ್ರಗಳನ್ನು ನಿರ್ವಹಿಸುವುದು ಹಾಗೂ ಅತಿಥಿ ಗ್ರಂಥಪಾಲಕರು ತಮಗೆ ನೀಡಿರುವ ದಾಸ್ತಾನಿನ ನಿರ್ವಹಣಾ ವರದಿಯನ್ನು ಮೇಲುಸ್ತುವಾರಿ ಬೋಧಕರ ಮೂಲಕ ಪ್ರಾಂಶುಪಾಲರಿಗೆ ಬಿಡುಗಡೆ ಹೊಂದುವ ಸಮಯದಲ್ಲಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

10. **ಆಯ್ಕೆಯಾದ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಯಾವುದೇ ಸ್ನಾತಕೋತ್ತರ ವಿಭಾಗ / ಕಾಲೇಜುಗಳಲ್ಲಿ / ಕೇಂದ್ರಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.**

11. ಸ್ನಾತಕೋತ್ತರ ಹಾಗೂ ಸ್ನಾತಕ ವಿಭಾಗಗಳಿಗೆ ಆಯ್ಕೆಯಾಗುವ ಅತಿಥಿ ಉಪನ್ಯಾಸಕರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದಲ್ಲಿ ಪಾಠ ಪ್ರವಚನಗಳನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ಅವರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಲ್ಲಿ, ಅಥವಾ ಕರ್ತವ್ಯ ಲೋಪ / ಅಶಿಸ್ತು ಪ್ರದರ್ಶಿಸಿದಲ್ಲಿ ಅಂತಹ ಅತಿಥಿ ಉಪನ್ಯಾಸಕರನ್ನು ತತಕ್ಷಣದಿಂದ ಸೇವೆಯಿಂದ ವಜಾಗೊಳಿಸಲಾಗುವುದು.

12. **ವಿದ್ಯಾರ್ಹತೆ ಹಾಗೂ ಜಾತಿ/ವರ್ಗ ಪ್ರಮಾಣ ಪತ್ರಗಳಿಗೆ ಸಂಬಂಧಪಟ್ಟ ಅಧಿಕೃತ ದಾಖಲಾತಿಗಳ ದೃಢೀಕರಣದ ಪ್ರತಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.**

13. **ಲಕೋಟೆಯ ಮೇಲೆ "ಸ್ನಾತಕೋತ್ತರ ಅಥವಾ ಸ್ನಾತಕ __________ ವಿಷಯದ ಅತಿಥಿ ಉಪನ್ಯಾಸಕರ ಸೇವೆಗೆ ಅರ್ಜಿ" ಎಂಬುದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.**

14. ಅರ್ಜಿ ಶುಲ್ಕದ ವಿವರ – **ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿ ಸಲ್ಲಿಸುವುದಾದಲ್ಲಿ ಪ್ರತಿ ವಿಷಯಕ್ಕೆ ಪ್ರತ್ಯೇಕ ಶುಲ್ಕವನ್ನು ಪಾವತಿಸಿ, ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಒಂದೇ ಶುಲ್ಕವನ್ನು ಪಾವತಿಸಿದಲ್ಲಿ ಮೂಲ ಪಾವತಿ ಮಾಡಿದ ವಿಭಾಗದ ಅರ್ಜಿ ಎಂದು ಮಾತ್ರ ಪರಿಗಣಿಸಲಾಗುವುದು.**

| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 | ಸಾಮಾನ್ಯ ವರ್ಗ | ವಿಕಲಚೇತನ ಅಭ್ಯರ್ಥಿಗಳು |
|---|---|---|
| ರೂ. 200-00 | ರೂ. 300-00 | ಯಾವುದೇ ಶುಲ್ಕ ಇರುವುದಿಲ್ಲ |

15. ಅರ್ಜಿ ಶುಲ್ಕವನ್ನು ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ ಇವರು ಯೋಜನೇತರ ಶೀರ್ಷಿಕೆಯಡಿ ಎಸ್.ಬಿ.ಐ. ಜ್ಞಾನ ಸಹ್ಯಾದ್ರಿ ಶಾಖೆಯಲ್ಲಿ ಹೊಂದಿರುವ ಖಾತೆ ಸಂಖ್ಯೆ: 54023036291, ಐಎಫ್ಎಸ್‌ಸಿ ಕೋಡ್ SBIN0040759ಗೆ ಎಲ್ಲಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿಯೂ ಚಲನ್ ಮೂಲಕ ಪಾವತಿಸಬಹುದಾಗಿರುತ್ತದೆ. ಶುಲ್ಕ ಪಾವತಿಯ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಿ ಮೂಲ ಚಲನ್ ಪ್ರತಿಯನ್ನು ಲಗತಿಸತಕ್ಕದ್ದು, ಡಿ.ಡಿ.ಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.

16. ಮೂಲ ವಿಷಯದಲ್ಲಿ ಪದವಿ ಪಡೆದ ಅಭ್ಯರ್ಥಿಗಳನ್ನು ಸಂಬಂಧಪಟ್ಟ ವಿಭಾಗದ ಆಯ್ಕೆಗೆ ಪ್ರಾತಿನಿಧ್ಯತೆ ನೀಡಲಾಗುವುದು. ಅಗತ್ಯತೆಗೆ ಅನುಗುಣವಾಗಿ ನಂತರ ಅಂತರ ಶಿಸ್ತೀಯ ಪದವಿಯನ್ನು ಪರಿಗಣಿಸುವುದು. ನೇಮಕಾತಿ ಮಂಡಳಿಯ ನಿರ್ಣಯಕ್ಕೆ ಬಿಟ್ಟಿದ್ದು.
17. ಮೇಲ್ಕಂಡ ವಿಷಯಗಳಿಗೆ ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ಅಗತ್ಯವಿರುವ ಒಟ್ಟು ಅತಿಥಿ ಉಪನ್ಯಾಸಕರುಗಳ ಸಂಖ್ಯೆಗನುಗುಣವಾಗಿ; ಸರ್ಕಾರದ ಪ್ರಚಲಿತ ಆದೇಶದನ್ವಯ ರೋಸ್ಟರ್ ನಿಯಮವನ್ನು ಕಡ್ಡಾಯವಾಗಿ ಪಾಲಿಸಲಾಗುವುದು.

**ವಿಶೇಷ ಸೂಚನೆ: ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಪ್ರತ್ಯೇಕ ಪತ್ರಗಳನ್ನು ಕಳುಹಿಸಲಾಗುವುದಿಲ್ಲ. ಸಂದರ್ಶನ ದಿನಾಂಕ ಮತ್ತು ಇತರೆ ಮಾಹಿತಿಗಳಿಗೆ ವಿಶ್ವವಿದ್ಯಾಲಯದ ವೆಬ್ ಸೈಟ್ www.kuvempu.ac.in ನ್ನು ಗಮನಿಸುವುದು. ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ; ಹಾಗೂ ವೈಯಕ್ತಿಕವಾಗಿ ಆಹ್ವಾನ ನೀಡಲು ವಿಶ್ವವಿದ್ಯಾಲಯ ಭಾದ್ಯವಾಗಿರುವುದಿಲ್ಲ.**

ಆದೇಶದ ಮೇರೆಗೆ

ಕುಲಸಚಿವ
ಕುಲಸಚಿವ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451, ಶಿವಮೊಗ್ಗ ಜಿಲ್ಲೆ

ಗೆ:

1. ಅಧ್ಯಕ್ಷರು / ಸಂಯೋಜನಾಧಿಕಾರಿಗಳು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ ಶಿವಮೊಗ್ಗ / ಕಡೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಕಡೂರು.
3. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಐ.ಡಿ.ಎಸ್.ಜಿ. ಕಾಲೇಜು ಆವರಣ, ಚಿಕ್ಕಮಗಳೂರು.
4. ಪ್ರಾಚಾರ್ಯರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
5. ಪ್ರಾಚಾರ್ಯರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
6. ಪ್ರಾಚಾರ್ಯರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
7. ಪ್ರಾಂಶುಪಾಲರು, ಎಸ್.ಎಂ.ಆರ್. ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ – ಮಾಹಿತಿಗಾಗಿ ಹಾಗೂ ಸದರಿ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲದಿಂದ ಪಡೆದು ತಮ್ಮ ವಿಭಾಗದ ಪ್ರಕಟಣ ಫಲಕದಲ್ಲಿ ಪ್ರಕಟಿಸಲು.
8. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
9. ಆಪ್ತ ಕಾರ್ಯಾಲಯ:– ಮಾನ್ಯ ಕುಲಪತಿಗಳು / ಕುಲಸಚಿವರು / ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
10. ನಿರ್ದೇಶಕರು, E-governance ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಮೇಲ್ಕಂಡ ಜಾಹೀರಾತು ಪ್ರಕಟಣೆಯನ್ನು ವಿಶ್ವವಿದ್ಯಾಲಯದ ಅಂತಾರ್ಜಾಲದಲ್ಲಿ ಪ್ರಕಟಿಸುವುದು.
11. ಕಛೇರಿ ಪ್ರತಿ.